ಅ) ಸುಮಾರು 2774

ಇ) ಕ.ರಾ.ರ.ಸಾ.ಸ.ಯಲ್ಲಿ 20 ವರ್ಷಗಳ ಸೇವೆಯನ್ನು ಸಲ್ಲಿಸಿರುವ- ಚಾಲಕರಿಗೆ ಸೇವಾ ಮುಂಬಡ್ತಿಯ ಅವಕಾಶವಿಲ್ಲದಿರುವುದರಿಂದ ಯಾವುದೇ ಚಾಲಕ 15 ವರ್ಷಗಳ ಸೇವೆ ಸಲ್ಲಿಸಿದಲ್ಲಿ ಅವರಿಗೆ ಉನ್ನತ ಶ್ರೇಣಿಯಲ್ಲಿ ಒಂದು ಮಟ್ಟ ಹೆಚ್ಚಿನ ಶ್ರೇಣಿಯನ್ನು ಈ ಕೆಳಕಂಡಂತೆ ನೀಡಲಾಗಿದೆ. ಚಾಲಕರ ವೇತನ ಶ್ರೇಣಿ : 970-20-1010-30-1160-40-1360-50-1560-75-1710.

ಚಾಲಕರ ಮೇಲ್ಪಟ್ಟದ : ರೂ 1360-50-1460-75-1835-90-2195.

ಆದರೆ ಮೇಲ್ಪಟ್ಟ ವೇತನ ಶ್ರೇಣಿ ಕೊಟ್ಟಾಗ ಹುದ್ದೆಯಲ್ಲಿ ಬದಲಾವಣೆ ಇರುವುದಿಲ್ಲ. ಅವರನ್ನು ಹಿರಿಯ ಚಾಲಕರುಗಳೆಂದು ಕರೆದು ಮುಂದುವರೆಸಲಾಗುತ್ತಿದೆ.

ಈ) ಉದ್ಭವಿಸುದಿಲ್ಲ.

ಯಡಿಯೂರಿನಲ್ಲಿ ದಿನವಹಿ ಕ.ರಾ.ರ.ಸಾ. ಸಂಸ್ಥೆಯ ಬಸ್ಸುಗಳ ನಿಲುಗಡೆ ಸಂಖ್ಯೆ

1513 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ತಾಲ್ಲೂಕಿನ ಯಡಿಯೂರಿನಲ್ಲಿ ದಿನವಹಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಎಷ್ಟು ಬಸ್ಸುಗಳಿಗೆ ನಿಲುಗಡೆ ಇದೆ?

ಆ) ಬೆಳಗಾವಿ, ಹುಬ್ಬಳ್ಳಿ, ಧಾರವಾಡ, ಗುಲ್ಬರ್ಗ ಮತ್ತು ಬೆಂಗಳೂರುಗಳಿಂದ ಯಡಿಯೂರಿಗೆ ಎಷ್ಟು ನೇರ ಸಾರಿಗೆ ಸೇವೆಗಳಿವೆ.

ಇ) ಕುಣಿಗಲ್ ತಾಲ್ಲೂಕಿನ ಯೂಡಿಯೂರಲ್ಲಿ ಬಸ್‌ನಿಲ್ದಾಣವಿದೆಯೆ?

ಈ) ಯಡಿಯೂರಿನಲ್ಲಿ ವಾಹನ ನಿಲ್ದಾಣವನ್ನು ನಿರ್ಮಿಸಲು ಉದ್ದೇಶಿಸಲಾಗಿದೆಯೇ?

ಶ್ರೀ ಅಜೀಜ್ ಸೇತ್ (ಸಾರಿಗೆ ಸಚಿವರು):

ಅ) 135

ಆ) ಬೆಂಗಳೂರಿನಿಂದ ಯಾಡಿಯೂರನ್ನು ಹೊರತುಪಡಿಸಿ ಬೇರೆ ಕಡೆಗಳಿಂದ ನೇರವಾದ ಸಾರಿಗೆ ಸೇವೆಗಳನ್ನು ಕಾರ್ಯಾಚರಣೆ ಮಾಡುತ್ತಿಲ್ಲ.

ಇ) ಇಲ್ಲ.

ಈ) ಪರಿಶೀಲಿಸಲಾಗುವುದು.

ಹುಳಿಯೂರು ಗ್ರಾಮಸ್ಥರು ಪ್ರಸೂತಿ ಆಸ್ಪತ್ರೆ ಮಂಜೂರುಮಾಡಲು ಠೇವಣಿ ಇಟ್ಟಿರುವುದು.

1203 - ಶ್ರೀ ಟಿ.ಬಿ. ಜಯಚಂದ್ರ, (ಕಳ್ಳಂಬೆಳ್ಳ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಳಿಯೂರು ಗ್ರಾಮಸ್ಥರನ್ನು ಪ್ರಸೂತಿ ಆಸ್ಪತ್ರೆ ಮಂಜೂರು ಮಾಡಲು 75,000 ರೂ. ಗಳನ್ನು ವಂತಿಕೆಯಾಗಿ ಬಹಳ ಹಿಂದೆ ಠೇವಣಿಯಾಗಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಪ್ರಸೂತಿ ಆಸ್ಪತ್ರೆ ಮಂಜೂರಾತಿ ತಡವಾದುದಕ್ಕೆ ಕಾರಣವೇನು?

ಇ) ಬೇಡಿಕೆಯನ್ನನುಸರಿಸಿ ತಕ್ಷಣ ಪ್ರಸೂತಿ ಆಸ್ಪತ್ರೆ ಮಂಜೂರು ಮಾಡುವಂತೆ ಸರಕಾರ ಆಶ್ವಾಸನೆ ನೀಡುವುದೇ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು) :

ಅ) ಬಂದಿದೆ.

ಆ) ಯೋಜನೆ ಅಯವ್ಯಯದಲ್ಲಿ ಹಣದ ಕೊರತೆ, ಇದ್ದು ಮತ್ತು ತುಮಕೂರು ಜಿಲ್ಲಾ ಪರಿಷತ್ತಿನಿಂದ ಸೂಕ್ತ ಪ್ರಸ್ತಾವನೆ ಬಾರದಿದ್ದುದರಿಂದ ಹುಳಿಯಾರು ಗ್ರಾಮಕ್ಕೆ ಹೆರಿಗೆ ಆಸ್ಪತ್ರೆ ಇದುವರೆಗೂ ಮಂಜೂರಾಗಿರುವುದಿಲ್ಲ.

ಇ) ಇಲ್ಲ. ಆದರೆ ಅದನ್ನು ಪರಿಶೀಲಿಸಲಾಗುವುದು.

ಕುಣಿಗಲ್‌ನಲ್ಲಿ ಸಾರ್ವಜನಿಕರ ಗ್ರಂಥಾಲಯದ ಬಗ್ಗೆ.

1516 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ಸಾರ್ವಜನಿಕ ಗ್ರಂಥಾಲಯವಿದೆಯೆ?

ಆ) ಹಾಗಿದ್ದಲ್ಲಿ, ಮೇಲ್ಕಂಡ ಗ್ರಂಥಾಲಯದಲ್ಲಿರುವ ಪುಸ್ತಕಗಳ ಸಂಖ್ಯೆ ಎಷ್ಟು?

ಇ) 1990ರ ಜನವರಿಯಿಂದ ಡಿಸೆಂಬರ ಅಂತ್ಯದವರೆಗೆ ಸೇರ್ಪಡೆಯಾದ ಹೊಸ ಪುಸ್ತಕಗಳ ಸಂಖ್ಯೆ ಎಷ್ಟು?

ಈ) ಕುಣಿಗಲ್ ತಾಲ್ಲೂಕಿಗೆ ಸಂಚಾರಿ ಗ್ರಂಥಾಲಯ ವಾಹನವನ್ನು ಒದಗಿಸಲಾಗಿದೆಯೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) ಕುಣಿಗಲ್‌ನಲ್ಲಿ ಶಾಖಾ ಗ್ರಂಥಾಲಯವಿದೆ.

ಆ) 6474

ಇ) 225.

ಈ) ಇಲ್ಲ.

ಬೆಂಗಳೂರು ವಿಶ್ವವಿದ್ಯಾನಿಲಯದ ರಜತ ಮಹೋತ್ಸವ ಅಂಗವಾಗಿ ವಿವಿಧೋದ್ದೇಶ ಸಭಾಂಗಣ ನಿರ್ಮಾಣ.

1509 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ವಿಶ್ವವಿದ್ಯಾನಿಲಯದ ರಜತ ಮಹೋತ್ಸವದ ಅಂಗವಾಗಿ ನಿರ್ಮಿಸಲಿರುವ ಸಣ್ಣ ಸಮ್ಮೇಳನ ಸಭಾಂಗಣವನ್ನು ಒಳಗೊಂಡ ವಿವಿಧೋದ್ದೇಶ ಸಭಾಂಗಣ ನಿರ್ಮಾಣ ಮಾಡುವ ಬಗ್ಗೆ ಸರ್ಕಾರವು ಧನ ಸಹಾಯ ನೀಡಿದೆಯೇ?

ಆ) ಹಾಗಿದ್ದಲ್ಲಿ ಧನ ಸಹಾಯದ ಮೊತ್ತವೆಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ, (ಶಿಕ್ಷಣ ಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಕರ್ನಾಟಕ ವಿ.ವಿ. ನಿಲಯವು ಬೆಂಗಳೂರಿನಲ್ಲಿರುವ ತನ್ನ ಬಾಹ್ಯ ಪರೀಕ್ಷಾ ಕೇಂದ್ರವನ್ನು ರದ್ದು ಪಡಿಸುವುದು.

1508 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?